ಮಾಡುತ್ತಿದ್ದೇವೆ. ಅದಕ್ಕೆ ಬಹುಶಃ ಇನ್ನು ಒಂದೆರಡು ತಿಂಗಳೊಳಗೆ ಖಾಲಿ ಇರುವ ಹುದ್ದೆಗಳನ್ನು ತುಂಬುತ್ತೇವೆ. ಮಾನ್ಯ ಸದಸ್ಯರು ಹೇಳಿದಹಾಗೆ, ಉರ್ದು ಶಿಕ್ಷಕರ ಹುದ್ದೆಗಳು ಏನು ಖಾಲಿ ಇವೆ ಅವುಗಳನ್ನು ಇದರ ಜೊತೆಯಲ್ಲಿಯೇ ತುಂಬುತ್ತೇವೆ.

ಶ್ರೀ ಎ.ಎಂ. ಹಿಂಡಸಗೇರಿ : ಮಾನ್ಯ ಅಧ್ಯಕ್ಷರೇ ಇಡೀ ರಾಜ್ಯದಲ್ಲಿ ಉರ್ದು ಟೀಚರ್ಸ್ ಸಂಖ್ಯೆ 386 ಎಂದು ಏನು ಕೊಟ್ಟಿದ್ದಾರೆ ಇದು ಸರಿಯಲ್ಲವೆಂದು ಹೇಳುವುದಕ್ಕೆ ಇಚ್ಚಿಪಡುತ್ತೇನೆ. ಏತಕ್ಕೆಂದರೆ, ನಮ್ಮ ಡಿಸ್ಟ್ರಿಕ್ಟನಲ್ಲಿ ಡಿ.ಡಿ.ಪಿ.ಐ.ರವರ ಕಡೆಯಿಂದ ಮಾಹಿತಿಯನ್ನು ತೆಗೆದುಕೊಂಡಪ್ರಕಾರ, 400 ಹುದ್ದೆಗಳು ಖಾಲಿ ಇವೆ. ನಮ್ಮ ಕಡೆ ಎ.ಇ.ಓ. ರಿಪೋರ್ಟ್ ಇದೆ. ಮಾನ್ಯ ಸಚಿವರಿಗೆ ಅದನ್ನು ಕಳುಹಿಸಿಕೊಡಿತ್ತೇನೆ. ಹುಬ್ಬಳ್ಳಿ ಧಾರವಾಡ ಮುನಿಸಿಪಲ್ ಕಾರ್ಪೊರೇಷನ್ ಏರಿಯಾಕ್ಕೆ 42 ಟೀಚರ್ಸ್ ಅವಶ್ಯಕತೆ ಇದೆ.ಆದರೆ ಇಡೀ ಸ್ಟೇಟ್‌ಗೆ 386 ಹುದ್ದೆಗಳು ಎಂದರೆ ಆ ಫಿಗರ್ಸ್ ಸರಿಯಲ್ಲ. ನಾನು ಮತ್ತೊಮ್ಮೆ ರಿಕ್ವೆಸ್ಟ್ ಮಾಡಿಕೊಳ್ಳುತ್ತೇನೆ. ಇದನ್ನು ಮತ್ತೊಂದು ಸಾರಿ ತಾವು ಪರಿಶೀಲನೆ ಮಾಡಬೇಕು ಮತ್ತೆ ಉರ್ದು ಶಾಲೆಗಳಲ್ಲಿ ಕನ್ನಡ ಟೀಚರ್‌ನ್ನು ಕೊಡುತ್ತಿಲ್ಲ. ತಾವು ಕನ್ನಡವನ್ನು ಕಲಿಸಬೇಕೆಂದು ಹೇಳುತ್ತೀರಿ. ಆದರೆ ಟೀಚರ್ಸ್‌ನ್ನು ಕೊಡುತ್ತಿಲ್ಲ. ಆದ್ದರಿಂದ ಉರ್ದು ಪ್ರಾಥಮಿಕ ಶಾಲೆಗಳಲ್ಲಿ ಕನ್ನಡವನ್ನು ಕಲಿಸತಕ್ಕಂಥ ವ್ಯವಸ್ಥೆಯನ್ನು ಮಾಡಬೇಕು. ತಾವು ಉರ್ದು ಟೀಚರ್ಸ್ ಫಿಗರ್ಸ್‌ನ್ನು ಏನು ಕೊಟ್ಟಿದ್ದೀರಿ ಇದನ್ನು ಮತ್ತೆ ಪರಿಶೀಲನೆ ಮಾಡಿ, ಖಾಲಿ ಬಿದ್ದಿರುವ ಹುದ್ದೆಗಳನ್ನು ಆದಷ್ಟು ಬೇಗನೆ ಭರ್ತಿ ಮಾಡುವುದಕ್ಕೆ ಪ್ರಯತ್ನ ಮಾಡಬೇಕೆಂದು ನಾನು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ

ಶ್ರೀ ಎಂ ವೀರಪ್ಪ ಮೊಯಿಲಿ : ಮಾನ್ಯ ಅಧ್ಯಕ್ಷರೇ, ನಮ್ಮ ಮಾಹಿತಿಯ ಪ್ರಕಾರ. ಉರ್ದು ಶಾಲೆಗಳಲ್ಲಿ 472 ಜನ ಅಭ್ಯರ್ಥಿಗಳನ್ನು ನೇಮಕ ಮಾಡಿದ್ದೇವೆ. ಉಳಿದದ್ದು 397 ಹುದ್ದೆಗಳು ಖಾಲಿ ಇವೆ. ನಿಮ್ಮ ಮಾಹಿತಿ ಪ್ರಕಾರ ಸರಿಯಲ್ಲವೆಂದು ಹೇಳುವುದಾದರೆ, ಪುನಃ ಮಾಹಿತಿಯನ್ನು ತರಿಸುತ್ತೇವೆ.

ಹರಪನಹಳ್ಳಿ ತಾಲ್ಲೂಕಿಗೆ ಸೂಕ್ತ ಸಾರಿಗೆ ವ್ಯವಸ್ಥೆ

2189 - ಶ್ರೀ ಬಿ.ಹೆಚ್. ಯಂಕಾನಾಯ್ಕ (ಹರಪನಹಳ್ಳಿ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹರಪನಹಳ್ಳಿ ತಾಲೂಕು ಅತೀ ಹೆಚ್ಚು ತಾಂಡ-ಹಟ್ಟಿಗಳನ್ನು ಹೊಂದಿರುವ ತಾಲ್ಲೂಕು ಆಗಿರುವುದು ಸರ್ಕಾರದ ಗಮನದಲ್ಲಿ ಇದೆಯೇ?

ಆ) ಈ ತಾಲೂಕಿಗೆ ಸಾರಿಗೆ ವ್ಯವಸ್ಥೆ ಬಗ್ಗೆ ಅನೇಕ ಸಲ ಅಧಿಕಾರಿಗಳಿಗೆ ದೂರು ನೀಡಿದರೂ ಯಾವುದೇ ಕ್ರಮ ತೆಗೆದುಕೊಳ್ಳದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ, ಸಾರಿಗೆ ವ್ಯವಸ್ಥೆಯನ್ನು ಹರಪನಹಳ್ಳಿ ತಾಲೂಕಿನ ಗ್ರಾಮಾಂತರ ಪ್ರದೇಶದಲ್ಲಿ ಸುಧಾರಿಸಲು ಸರ್ಕಾರ ಕೈಗೊಳ್ಳಲುದ್ದೇಶಿಸಿರುವ ಕ್ರಮಗಳೇನು?

ಶ್ರೀ ಅಜೀಜ್ ಸೇಠ್ (ಸಾರಿಗೆ ಸಚಿವರು) :

ಅ) ಇದೆ

ಆ) ಇಲ್ಲ

ಇ) ಅಗತ್ಯ ಸಂಖ್ಯೆಯ ಸಾರಿಗೆಗಳಲ್ಲಿ ನಿಯಮಿತವಾಗಿ ಮತ್ತು ಸಮಯಕ್ಕೆ ಸರಿಯಾಗಿ ಓಡಿಸಲು ಕ್ರಮ ಕೈಗೊಳ್ಳಲಾಗಿದೆ. ತಾಲ್ಲೂಕಿನಲ್ಲಿ ಈ 196 ಸಾರಿಗೆಗಳಲ್ಲಿ ಕಾರ್ಯಚರಣೆಗೆ ಒಳಪಡಿಸಲಾಗಿದೆ. ಇದಲ್ಲದೆ ಸಾರಿಗೆಗಳು ಅಗತ್ಯಕ್ಕಿಂತ ಕಡಿಮೆಯೆಂದು ಕಂಡುಬರುವಂತಹ ಮಾರ್ಗಗಳಲ್ಲಿ ಹೆಚ್ಚುವರಿ ಬಸ್ಸುಗಳನ್ನು ಪ್ರಾರಂಭಿಸಲು ಉದ್ದೇಶಿಸಲಾಗಿದೆ.

ಶ್ರೀ ಬಿ.ಹೆಚ್. ಯಂಕಾನಾಯಕ್ : ಮಾನ್ಯ ಅಧ್ಯಕ್ಷರೇ, ದಾವಣಗೆರೆಯಲ್ಲಿ ಡಿಪೋ ಇದೆ, ಬಳ್ಳಾರಿಯಲ್ಲಿ ಡಿಪೋ ಇದೆ. ಬಳ್ಳಾರಿಯಲ್ಲಿ ಯಾರು ಕೆ.ಎಸ್.ಆರ್.ಟಿ.ಸಿ. ಅಧಿಕಾರಿಗಳು ಇದ್ದಾರೆಂಬುದನ್ನು ವಿವರವಾಗಿ ಹೇಳಬೇಕು. ಉತ್ತರದಲ್ಲಿ ಅಚ್ಚಾಗಿದೆ ಎಂದು ವಿಧಾನಸೌಧದಲ್ಲಿ ಕುಳಿತು ಹೇಳುವುದಲ್ಲ. ನಮ್ಮ ತಾಲ್ಲೂಕಿನಲ್ಲಿ ಹೆಚ್ಚಾಗಿ ತಾಂಡಗಳಲ್ಲಿರುವ ಮಕ್ಕಳು ಕಾಲೇಜುಗಳಲ್ಲಿ ಓದುತ್ತಿದ್ದಾರೆ. ಹಿಂದಿನ ಸರ್ಕಾರ ಇದ್ದಾಗ ಅವರಿಗೆ ಬಸ್‌ಸೌಕರ್ಯವನ್ನು ಕೊಟ್ಟಿದ್ದರು. ಅವರು ಈಗ ಬಸ್‌ಗಳಿಗೆ ಬಂದರೆ ಜಾಗ ಸಿಗುವುದಿಲ್ಲ. ಅವ್ಯವಸ್ಥೆಯಾಗಿದೆ. ದಾವಣಗೆರೆ ಡಿಪೋದಲ್ಲಿ ಎಷ್ಟು ಬಸ್‌ಗಳಿವೆ? ಹಡಗಲಿಯಲ್ಲಂತೂ ಡಿಪೋ ಇದ್ದರೂ ಬಾಗಿಲು ಹಾಕಿರುತ್ತದೆ. ಡಿಪೋ ಎಂದು ಹೆಸರಿಗೆ ಮಾತ್ರ ಇರುತ್ತದೆ. ಡಿಪೋನಲ್ಲಿ ಮ್ಯಾನೇಜರ್ ಯಾರು ಇದ್ದಾರೆ? ಬಳ್ಳಾರಿಯಲ್ಲಿ ಕೆ.ಎಸ್.ಆರ್.ಟಿ.ಸಿ ಅಧಿಕಾರಿಗಳು ಯಾರು ಇದ್ದಾರೆ, ಅವರ ಹೆಸರಾದರೂ ಗೊತ್ತಿದೆಯೇ? ಆಮೇಲೆ ಉತ್ತರದಲ್ಲಿ ಹರಪ್ಪನ ಹಳ್ಳಿಯಲ್ಲಿ 196 ಬಸ್‌ಗಳಿದೆ ಎಂದು ಹೇಳಿದ್ದಾರೆ ಅಲ್ಲಿ ಒಂದು ಬಸ್‌ಸ್ಟಾಪ್ ಇದೆ. ಡಿಪೋ ಇಲ್ಲ. ಮತ್ತೊಂದಿಲ್ಲ. ಅಲ್ಲಿಯ ಜನರಿಗೆ ಬಹಳ ತೊಂದರೆಯಾಗಿದೆ. ಇಲ್ಲದಿದ್ದರೆ ಡಿಪೋವನ್ನಾದರೂ ಮುಚ್ಚಿ, ಪ್ರವೈಟ್‌ನವರಿಗೆ ಬಸ್‌ಗಳನ್ನು ಓಡಿಸಲು ಪರವಾನಗಿ ಕೊಡಿ. ಅವರಾದರೂ ಸರಿಯಾಗಿ ನಡೆಸುತ್ತಾರೆ. ಈ ರೀತಿ ಮಾಡಿದರೆ ನಮ್ಮ ಸರ್ಕಾರಕ್ಕೆ ಗೌರವ ಬರುವುದಿಲ್ಲ. ಈ ಸಂಖ್ಯೆಗೂ ಮರ್ಯಾದೆ ಇರುವುದಿಲ್ಲ. ಮೊನ್ನೆ 24ನೇ ತಾರೀಖು ನೂರಾರು ಹುಡುಗರು ಸ್ಟ್ರೈಕ್ ಮಾಡಿದರು. ಆದ್ದರಿಂದ ಈ ರೀತಿ ನಡೆಸಿದರೆ ಬಹಳ ತೊಂದರೆಯಾಗುತ್ತದೆ. ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳಿಗೆ ಸರಿಯಾಗಿ ಹೇಳಿ ಬಸ್‌ಗಳನ್ನು ನಡೆಸುವಂಥ ವ್ಯವಸ್ಥೆಯನ್ನು ಮಾಡಿ ಇಲ್ಲವೇ ಡಿಪೋ ಬಾಗಿಲನ್ನು ಹಾಕಿಸಿಬಿಡಿ. ಈ ಎರಡರಲ್ಲಿ ಯಾವುದನ್ನು ಹೇಳುತ್ತಾರೋ ಕೇಳುತ್ತೇನೆ.

ಶ್ರೀ ಅಜೀಜ್ ಸೇಠ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿದ್ದನ್ನು ನಾನು ಅರ್ಥಮಾಡಿಕೊಳ್ಳಬೇಕಾದರೆ ಸ್ವಲ್ಪ ಕಷ್ಟವಾಗುತ್ತದೆ. ಹರಪನಹಳ್ಳಿ ತಾಲ್ಲೂಕಿನಲ್ಲಿ 196 ಬಸ್‌ಗಳನ್ನು ಓಡಿಸುತ್ತಿದ್ದೇವೆ. ಇಲ್ಲಿ ತಾಂಡಗಳು ಹೆಚ್ಚಿರುತ್ತವೆ. ಮೈನ್ ತಾಂಡಗಳು ಎಂದರೆ ಹಟ್ಟಿ ತಾಲ್ಲೂಕ್, ಕೆಂಚೇನಹಳ್ಳಿತಾಂಡ, ದುಗ್ಗಟ್ಟಿ ದೊಡ್ಡತಾಂಡ ಅಲ್ಲನಲ್ಲೂರ್ ಸಣ್ಣ ತಾಂಡ, ಚಿಕ್ಕಲಕ್ಷ್ಮೀಪುರತಾಂಡ, ದೇವನಹಳ್ಳಿ ಸಣ್ಣತಾಂಡ - ಇಲ್ಲೆಲ್ಲ ಬಸ್‌ಗಳನ್ನು ಓಡಿಸುತ್ತಿರುತ್ತೇವೆ.

ಅಲ್ಲಿ ಏನು ಕಷವಾಗಿದೆ ಅಂದರೆ, ಈ 9 ಏರಿಯಾಗಳಲ್ಲಿ ರಸ್ತೆಗಳು ಸರಿಯಾಗಿಲ್ಲ. ದೇವನಹಳ್ಳಿ ಹರಪನಹಳ್ಳಿ ಇತ್ಯಾದಿ ರಸ್ತೆಗಳು ಕೆಟ್ಟುಹೋಗಿರುವುದರಿಂದ ಬಹಳಷ್ಟು ಬಸ್ಸುಗಳು ಪಂಚರ್ ಆಗಿವೆ. brake down ಆಗಿದೆ. ಅವುಗಳನ್ನು ಡಿಪೋಗೆ ತೆಗೆದುಕೊಂಡು ಹೋಗಿ ರಿಪೇರಿ ಮಾಡುವುದರಲ್ಲಿ ಕೆಲವು ಡಿಲೇ ಆಗುತ್ತಿದೆ. but, I will assure the Hon'ble Member that I will see that his complaints have been set right.

ಶ್ರೀ ಬಿ.ಹೆಚ್. ಯಂಕಾನಾಯಕ್ : ಹುಚ್ಚಂಗಿ ದುರ್ಗ - ಹರಪನಹಳ್ಳಿ ರಸ್ತೆ ಟಾರ್ ರಸ್ತೆ ಇದೆ. ಅಲ್ಲಿ ಟೈಮಿಗೆ ಒಂದು ಬಸ್ ಏನಾದರೂ ಓಡುತ್ತಿದೆಯೇ ಎಂದು ಅಧಿಕಾರಿಗಳನ್ನು ಕೇಳಿ. ಸುಮ್ಮನೆ ತಾಂಡಾಗಳ ಹೆಸರನ್ನು ಹೇಳುತ್ತಿದ್ದಾರೆ. ಅಲ್ಲಿ ಬಸ್ಸಿನ ವ್ಯವಸ್ಥೆ ಇಲ್ಲ.

ಶ್ರೀ ಅಜೀಜ್ ಸೇಠ್ : ಮಾನ್ಯ ಸದಸ್ಯರು ಬಂದರೆ ಅವರ ಎದುರುಗಡೆಯೇ ಅಧಿಕಾರಿಗಳನ್ನು ಕರೆಸಿ, ತೀರ್ಮಾನ ಮಾಡಿಕೊಡುತ್ತೇನೆ.

ಶ್ರೀ ಬಿ.ಹೆಚ್. ಯಂಕಾನಾಯಕ್ : ಹಡಗಲಿ ಡಿಪೋದಿಂದ ಧರ್ಮಸ್ಥಳಕ್ಕೆ ಏನು ಒಂದು ಬಸ್ಸು ಹೋಗುತ್ತಿತ್ತು ಅದನ್ನು ಒಂದು ವಾರದಿಂದ ನಿಲ್ಲಿಸಿದ್ದಾರೆ. ಅದನ್ನು

ಹರಿಹರ ರಸ್ತೆಯಲ್ಲಿ ಬಿಡಬಹುದು. ನಿಮ್ಮ ಸರ್ಕಾರ ಬಂದಮೇಲೆ ಒಂದು ಬಸ್ಸು ಇಲ್ಲ, ರಾಜೀನಾಮೆ ಕೊಡಿ ಎಂದು ಜನರು ಸ್ಟೈಕ್ ಮಾಡುತ್ತಿದ್ದಾರೆ. ರಸ್ತೆಗಳು ಸರಿಯಾಗಿಲ್ಲ ಬಸ್ಸುಗಳು ಇಲ್ಲ,ಅಧಿಕಾರಿಗಳು ಇಲ್ಲವೇ ಇಲ್ಲ. ಯಾರೊ ಒಬ್ಬರು ಇದ್ದವರು ರಜೆಯ ಮೇಲೆ ಇದ್ದಾರೆ. ದಾವಣಗೆರೆಯ ಡಿಪೋ ಮ್ಯಾನೇಜರ್ ಎಷ್ಟು ಸಲ ಹೋದರೂ ಇರುವುದಿಲ್ಲ. ವೇಳೆಗೆ ಸರಿಯಾಗಿ ಒಂದು ಬಸ್ಸೂ ಓಡಾಡುವುದಿಲ್ಲ. ನಿಮಗೆ ಸಾಧ್ಯವಿಲ್ಲದಿದ್ದರೆ ಖಾಸಗಿಯವರಿಗಾದರೂ ಬಸ್ಸುಗಳನ್ನು ಓಡಿಸುವುದಕ್ಕೆ ಪರವಾನಗಿ ಕೊಡಿ. ಸುಮ್ಮನೆ ಮಂತ್ರಿಗಳಾಗಿ ವಿಧಾನಸೌಧದಲ್ಲಿ ಕುಳಿತು ಹೇಳುವುದರಿಂದ ಏನೂ ಪ್ರಯೋಜನವಾಗುವುದಿಲ್ಲ. ಹಳ್ಳಿಗಳಲ್ಲಿ ಅನುಭವಿಸುವವರು ನಾವು. ಇಲ್ಲಿ ಕುಳಿತು ಆ ಊರಿಗೆ ಬಸ್ಸು ಕೊಡುತ್ತೇವೆ,ಈ ಊರಿಗೆ ಬಸ್ಸು ಕೊಡುತ್ತೇವೆಂದು ಹೇಳಿದರೆ ಆಗುವುದಿಲ್ಲ. ಕೆಲವು ಕಡೆ ರಸ್ತೆಗಳು ಸರಿಯಾಗಿಲ್ಲ. ಅದಕ್ಕೆಲ್ಲ ಸರಿಯಾದ ವ್ಯವಸ್ಥೆ ಮಾಡಬೇಕು. ಮಾನ್ಯ ಮಂತ್ರಿಗಳಿಗೆ ಕನ್ನಡದಲ್ಲಿ ಮಾತನಾಡುವುದಕ್ಕೆ ಬರುವುದಿಲ್ಲ. ಅಧಿಕಾರಿಗಳಿಗೆ ಸರಿಯಾಗಿ ಸೂಚನೆ ನೀಡಿದರೆ ಮಾಡುತ್ತಾರೆ. ದಯಮಾಡಿ ದಾವಣಗೆರೆ ಡಿಪೋ ಮ್ಯಾನೇಜರ್‌ಗೆ ಮತ್ತು ಸಂಬಂಧಪಟ್ಟ ಅಧಿಕಾರಿಗಳಿಗೆ ಸರಿಯಾಗಿ ಹೇಳಿ.

ಅಧ್ಯಕ್ಷರು : ನೀವು ಅವರ ಛೇಂಬರ್‌ಗೆ ಹೋಗಿ,ಅಧಿಕಾರಿಗಳನ್ನು ಕರೆಯಿಸಿ ಸರಿ ಮಾಡುತ್ತಾರೆ.

ವಿದ್ಯುತ್ ಉತ್ಪತ್ತಿಗಾಗಿ ವಿಶ್ವ ಬ್ಯಾಂಕ್ ನೆರವು

2190 - ಶ್ರೀ ಎಂ.ವಿ. ವೆಂಕಟಪ್ಪ (ಮುಳಬಾಗಿಲು) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ವಿದ್ಯುತ್ ನಿಗಮ ಮತ್ತು ಮಂಡಳಿಗಳು ವಿದ್ಯುತ್ ಉತ್ಪತ್ತಿ ಯೋಜನೆಗೆ ವಿಶ್ವಬ್ಯಾಂಕ್ ನೆರವು ಪಡೆಯಲು ವಿಶ್ವಬ್ಯಾಂಕ್‌ನೊಡನೆ ರಾಜ್ಯ ಸರ್ಕಾರ ನಡೆಸಿದ ಮಾತುಕತೆಯ ವಿವರಗಳೇನು?

ಆ) ಇದರಿಂದ ಎಷ್ಟು ಮೆಗವ್ಯಾಟ್ ವಿದ್ಯುಚ್ಛಕ್ತಿ ಉತ್ಪಾದನೆಯಾಗಬಹುದು?

ಇ) ಈ ಯೋಜನೆಗೆ ತಗಲುವ ಅಂದಾಜು ವೆಚ್ಚ ಎಷ್ಟು?

ಶ್ರೀ ಎಂ. ರಾಮಪ್ಪ (ಇಂಧನ ರಾಜ್ಯ ಸಚಿವರು) :

ಅ) ಕಾಳಿ ವಿದ್ಯುತ್ ಯೋಜನೆ ಹಂತ-2 ಮತ್ತು ಶರಾವತಿ ಕಿಳ ಪ್ರವಾಹ ವಿದ್ಯುತ್ ಯೋಜನೆ ಇವುಗಳನ್ನು ವಿಶ್ವಬ್ಯಾಂಕಿನ ಆರ್ಥಿಕ ಸಹಾಯದಿಂದ ಕಾರ್ಯಗತ ಮಾಡಲಾಗುತ್ತಿದೆ. ಈ ಯೋಜನೆಗಳ ಸ್ಥಾಪನೆಯ ಪ್ರಗತಿಯನ್ನು ಪರಿವೀಕ್ಷಿಸಲು ವಿಶ್ವಬ್ಯಾಂಕಿನಿಂದ ನೇಮಿಸಲ್ಪಟ್ಟ ಉಸ್ತುವಾಗಿ ಮಿಷನ್ ಜುಲೈ ತಿಂಗಳ ದಿನಾಂಕ 15 ರಿಂದ 19 ರವರೆಗೆ ರಾಜ್ಯಕ್ಕೆ ಭೇಟಿ ಇತ್ತು ಕರ್ನಾಟಕ ವಿದ್ಯುತ್ ನಿಗಮ ನಿಯಮಿತ, ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ, ರಾಜ್ಯ ಸರ್ಕಾರದ ಅಧಿಕಾರಿಗಳು ಮತ್ತು ಅಂತಿಮವಾಗಿ ಮಾನ್ಯ ಮುಖ್ಯಮಂತ್ರಿಯವರೊಂದಿಗೆ ನಡೆಸಿದ ಸಭೆಯಲ್ಲಿ ಚರ್ಚೆ ನಡೆಸಿತು.

ಆ) ಈ ಎರಡು ಯೋಜನೆಗಳ ಒಟ್ಟು ಸ್ಥಾಪನಾ ಸಾಮರ್ಥ್ಯ 510 ಮೆ.ವ್ಯಾ. ಮತ್ತು ಇದರಿಂದ ವಾರ್ಷಿಕವಾಗಿ ಉತ್ಪಾದಿಸಬಹುದಾದ ವಿದ್ಯುತ್ ಪ್ರಮಾಣ 1,700 ದಶಲಕ್ಷ ಯೂನಿಟ್‌ಗಳು.

ಇ) ಕಾಳಿ ವಿದ್ಯುತ್ ಯೋಜನೆಯ ಹಂತ 2ಕ್ಕೆ ತಗಲಬಹುದಾದ ಅಂದಾಜು ವೆಚ್ಚ: